PROJECT 560 · 560 000 FOUND SPACES

20 Years of Celebrating the Arts
India Foundation for the Arts
I F A

# ಪ್ರಾಜೆಕ್ಟ್ ೫೬೦ ೨೦೧೫

**ಸಿಟಿ ಇಂಡಿಯಾ** ಸಹಭಾಗಿತ್ವದಲ್ಲಿ ಇಂಡಿಯ ಫೌಂಡೇಷನ್ ಫಾರ್ ದಿ ಆರ್ಟ್ಸ್ (**ಐಎಫ್ಎ**)ನ **ಪ್ರಾಜೆಕ್ಟ್ ೫೬೦, ೨೦೧೫**

## ಕಲಾವಿದರಿಂದ ಪ್ರಸ್ತಾವನೆಗಳಿಗಾಗಿ ಆಹ್ವಾನ

**ಪ್ರಾಜೆಕ್ಟ್ ೫೬೦**ರ ಎರಡನೇ ಆವೃತ್ತಿಗಾಗಿ ಬೆಂಗಳೂರು ನಗರದಲ್ಲಿ ನೀವೇ ಕಂಡುಕೊಂಡ ಜಾಗದಲ್ಲಿ ಕಲಾಯೋಜನೆಗಳನ್ನು ಕೈಗೊಳ್ಳಲು ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್ (ಐಎಫ್ಎ) ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿದೆ.

## ಪ್ರಾಜೆಕ್ಟ್ ೫೬೦ ಎಂದರೇನು?

**೫–೬–೦** ಅನ್ನೋದು ಬೆಂಗಳೂರು ನಗರದ ಅಂಚೆ ಪಿನ್‌ಕೋಡ್‌ಗಳ ಮೊದಲ ಮೂರು ಸಂಖ್ಯೆ.

ಬೆಂಗಳೂರು ನಗರದಲ್ಲಿ ತಾವೇ ಕಂಡುಕೊಂಡ ಯಾವುದೇ ಜಾಗದಲ್ಲಿ ಕಲಾಯೊಜನೆಗಳನ್ನು ಕೈಗೊಂಡು ಆ ಜಾಗವನ್ನು ಜೀವಂತವಾಗಿಸಲು ಕಲಾವಿದರನ್ನು ಪ್ರೇರೇಪಿಸುವುದೇ **ಪ್ರಾಜೆಕ್ಟ್ ೫೬೦**ರ ಉದ್ದೇಶ.

ನಿಮಗೆ ಪ್ರೇರೇಪಣೆ ಅಥವಾ ಸ್ಫೂರ್ತಿ ನೀಡುವ ಯಾವುದೇ ಜಾಗವನ್ನು ಇದಕ್ಕಾಗಿ ಆಯ್ಕೆ ಮಾಡಬಹುದು. ಅದು ಮಾರುಕಟ್ಟೆಯೇ ಇರಲಿ, ಪಾರ್ಕ್ ಆಗಿರಲಿ ಅಥವಾ ಖಾಲಿ ಸೈಟ್ ಆಗಿರಲಿ. ಕಾಲಾಂತರದಲ್ಲಿ ಅರ್ಥವನ್ನು ಕಳೆದುಕೊಂಡಿರುವ, ಹೊಸ ಅರ್ಥಗಳನ್ನು ಅರಸುತ್ತಿರುವ, ಜನರ ಮನಸ್ಸಿನಿಂದ ಮರೆಯಾಗಿರುವ ಅಥವಾ ಮತ್ತೆ ಅನ್ವೇಷಿತವಾಗಬೇಕಾಗಿರುವ, ಹಲವು ಕಥೆಗಳುಳ್ಳ, ಸೋಲು–ಗೆಲುವು, ಹೋರಾಟ, ಜನರ ಇತಿಹಾಸ, ಬೆಂಗಳೂರಿನ ನಗರೀಕರಣದ ಭರಾಟೆಯಲ್ಲಿ ಕಳೆದು ಹೋಗಿರುವ ಅಥವಾ ಇಷ್ಟು ವರ್ಷವಾದರೂ ತನ್ನ ಕಂಪನ್ನು ಕಳೆದುಕೊಳ್ಳದ, ನೀವು ಕಂಡುಕೊಂಡ ಯಾವುದೆ ಜಾಗ ಅದಾಗಿರಬಹುದು.

**ಅನುದಾನದ ಮೊತ್ತ: ಗರಿಷ್ಠ ೧.೫ ಲಕ್ಷ ರೂ.**

## ಯಾರೆಲ್ಲಾ ಅರ್ಜಿ ಸಲ್ಲಿಸಬಹುದು?

ಸಂಗೀತಗಾರರು, ನೃತ್ಯಪಟುಗಳು, ರಂಗಭೂಮಿ ಕಲಾವಿದರು, ಗೊಂಬೆಯಾಡಿಸುವವರು, ಕಥೆ ಹೇಳುವವರು, ಕವಿಗಳು, ಹಾಸ್ಯ ಕಲಾವಿದರು, ಜಾದೂಗಾರರು, ಬರಹಗಾರರು, ಛಾಯಾಗ್ರಾಹಕರು, ಚಲನಚಿತ್ರಕಾರರು, ಶಿಲ್ಪ ಕಲಾವಿದರು ಅರ್ಜಿ ಸಲ್ಲಿಸಬಹುದು.

ಪ್ರಾಜೆಕ್ಟ್ ೫೬೦, ೨೦೧೫ರಲ್ಲಿ ಬೆಂಗಳೂರು ನಗರ ನಿವಾಸಿಗಳಾದ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ. ಆದರೆ ದೇಶದ ವಿವಿಧೆಡೆಯ ಕಲಾವಿದರೂ ಇದರಲ್ಲಿ ಭಾಗವಹಿಸಬಹುದು. ನೀವು ಭಾರತದ ಪ್ರಜೆಯಾಗಿರಬೇಕು. ಒಂದು ವೇಳೆ ನೀವು ಭಾರತೀಯ ಪ್ರಜೆಯಾಗಿರದಿದ್ದರೆ ಕನಿಷ್ಠ ೫ ವರ್ಷ ಭಾರತದಲ್ಲಿ ವಾಸವಾಗಿರಬೇಕು. ನೀವು ದೇಶದ ಯಾವುದೇ ಭಾಗದವರಾದರೂ ನೀವು ಕೈಗೊಳ್ಳುವ ಕಲಾಯೋಜನೆ ಬೆಂಗಳೂರಿನಲ್ಲಿ ನೀವು ಕಂಡುಕೊಂಡ ಜಾಗದಲ್ಲೇ ಆಗಿರಬೇಕು.

## ಅರ್ಜಿ ಸಲ್ಲಿಸುವುದು ಹೇಗೆ?

ನಿಮ್ಮ ಪ್ರಸ್ತಾವನೆಯನ್ನು ಕಳುಹಿಸುವಾಗ, ಈ ಕೆಳಗಿನ ಅಂಶಗಳ ಕುರಿತು ವಿವರವಾಗಿ ತಿಳಿಸಿ:

೧. ನಿಮ್ಮ ಈಗಿನ ಕಾರ್ಯಕ್ಷೇತ್ರ ಹಾಗೂ ಕಂಡುಕೊಂಡ ಜಾಗದಲ್ಲಿ ಕಲಾಯೋಜನೆಯನ್ನು ಕೈಗೊಳ್ಳಲು ನಿಮಗಿರುವ ಆಸಕ್ತಿ
೨. ನಿಮ್ಮ ಯೋಜನೆಗೆ ನೀವು ಬೆಂಗಳೂರಿನಲ್ಲಿ ಆಯ್ಕೆ ಮಾಡಿರುವ ಜಾಗ
೩. ನೀವು ಆಯ್ದ ಜಾಗದಲ್ಲಿ ಮಾಡುವ ಯೋಜನೆಯ ಬಗ್ಗೆ ಮಾಹಿತಿ, ಆ ಜಾಗದ ಹಿನ್ನೆಲೆ ಹಾಗೂ ಅದನ್ನು ನೀವು ಹೇಗೆ ಬಳಸುತ್ತೀರಿ ಎಂಬ ಬಗ್ಗೆ ವಿವರಣೆ
೪. ನಿಮ್ಮ ಜೊತೆ ಕೆಲಸ ಮಾಡುವ ಸಹಕಲಾವಿದರ ವಿವರಣೆ ಹಾಗೂ ಯೋಜನೆಯಲ್ಲಿ ಅವರ ಪಾತ್ರ
೫. ಯೋಜನೆಯ ಖರ್ಚು ವೆಚ್ಚ ಹಾಗೂ ವೇಳಾಪಟ್ಟಿ

## ಪ್ರಸ್ತಾವನೆಯೊಂದಿಗೆ ಇದನ್ನೂ ಕೊಡಲು ಮರೆಯಬೇಡಿ...

೧. ಕಾರ್ಯನಿರ್ವಾಹಕ ನಿರ್ದೇಶಕರಿಗೆ ಪ್ರಸ್ತಾವನಾ ಪತ್ರ
೨. ನೀವು ಆಯ್ಕೆ ಮಾಡಿದ ಜಾಗವನ್ನು ಬಳಸಲು ಸಂಬಂಧಪಟ್ಟ ಪ್ರಾಧಿಕಾರಗಳ ಅನುಮತಿ ಪತ್ರ
೩. ನಿಮ್ಮ ಈ ಹಿಂದಿನ ಪ್ರಾಜೆಕ್ಟ್‌ಗಳ ಛಾಯಾಚಿತ್ರ, ಆಡಿಯೋ ಅಥವಾ ವೀಡಿಯೋ ರೆಕಾರ್ಡಿಂಗ್‌ಗಳು
೪. ನಿಮ್ಮ ವಿಳಾಸ, ದೂರವಾಣಿ/ಫ್ಯಾಕ್ಸ್ ನಂಬರ್, ಇ-ಮೇಲ್ ಐಡಿಯನ್ನು ಒಳಗೊಂಡ ಇತ್ತೀಚಿನ ಸ್ವವಿವರ (ಬಯೋಡಾಟಾ)

**ನಿಮ್ಮ ಪ್ರಸ್ತಾವನೆಯನ್ನು ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಕಳುಹಿಸಬಹುದು.**

ನಿಮ್ಮ ಕರಡು ಪ್ರಸ್ತಾವನೆ ಅಥವಾ ಪ್ರಾಜೆಕ್ಟ್ ಐಡಿಯಾಗಳನ್ನು ಮೇ ೧೫, ೨೦೧೫ರೊಳಗೆ sumana@indiaifa.org ಇಮೇಲ್ ಐಡಿಗೆ ಕಳುಹಿಸಿ. ಅಂತಿಮ ಪ್ರಸ್ತಾವನೆಯು ನಮ್ಮ ಕಚೇರಿ ತಲುಪಬೇಕಾದ ಕೊನೆಯ ದಿನಾಂಕ ಜೂನ್ ೧೫, ೨೦೧೫. ಆನ್‌ಲೈನ್‌ನಲ್ಲಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

## ಆಯ್ಕೆ ಪ್ರಕ್ರಿಯೆ

ಅರ್ಜಿಗಳನ್ನು ತಜ್ಞರ ಸಮಿತಿ ಪರಿಶೀಲನೆ ನಡೆಸಲಿದೆ. ಆಯ್ಕೆಯಾದವರಿಗೆ ಜುಲೈ ೨೦೧೫ರ ಆರಂಭದಲ್ಲಿ ಮಾಹಿತಿ ನೀಡುತ್ತೇವೆ. ಜುಲೈ ೧೫ರ ಬಳಿಕ ಆಯ್ಕೆಯಾದವರು ತಜ್ಞರ ಸಮಿತಿ ಮುಂದೆ ಹಾಜರಾಗಬೇಕಾಗುತ್ತದೆ. ಆಗಸ್ಟ್ ೨೦೧೫ರ ಮೊದಲ ವಾರದಲ್ಲಿ ಆಯ್ಕೆಯಾದ ೧೦ ಕಲಾವಿದರು/ ಕಲಾ ತಂಡಗಳಿಗೆ ಅನುದಾನ ಪ್ರಕಟಿಸಲಾಗುವುದು. ಅನುದಾನ ನೀಡುವ ವಿಷಯದಲ್ಲಿ ಐಎಫ್‌ಎ ನಿರ್ಧಾರವೇ ಅಂತಿಮ.

ಆಯ್ಕೆಯಾದ ಕಲಾವಿದರು/ ಕಲಾ ತಂಡಗಳಿಗೆ ೨೦೧೫ರ ಸೆಪ್ಟೆಂಬರ್‌ನಿಂದ ನವೆಂಬರ್‌ವರೆಗೆ ಮೂರು ತಿಂಗಳ ಕಾಲಾವಕಾಶ ದೊರೆಯಲಿದ್ದು, ಈ ಅವಧಿಯಲ್ಲಿ ನೀವೇ ಕಂಡುಕೊಂಡ ಜಾಗದಲ್ಲಿ ನಿಮ್ಮ ಕಲಾಯೋಜನೆಗಳನ್ನು ಕಾರ್ಯಗತ ಮಾಡಬಹುದು. ಈ ಎಲ್ಲಾ ಯೋಜನೆಗಳು ೨೦೧೫ರ ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆಯುವ ಪ್ರಾಜೆಕ್ಟ್ ೫೬೦, ೨೦೧೫ ಹಬ್ಬದಲ್ಲಿ ಸಮಾಪ್ತಿಗೊಳ್ಳುತ್ತವೆ.

ಪ್ರಾಜೆಕ್ಟ್ ೫೬೦, ೨೦೧೪ರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಕ್ಲಿಕ್ ಮಾಡಿ. ನಿಮ್ಮ ಪ್ರಸ್ತಾವನೆಯ ಬಗ್ಗೆ ಯಾವುದೇ ಮಾಹಿತಿ ಅಥವಾ ಸ್ಪಷ್ಟೀಕರಣ ಬೇಕಾದಲ್ಲಿ, ಕಾರ್ಯಕ್ರಮ ನಿರ್ವಾಹಕಿ ಸುಮನಾ ಚಂದ್ರಶೇಖರ್ ಅವರನ್ನು **sumana@indiaifa.org** ಇ-ಮೇಲ್ ವಿಳಾಸದ ಮೂಲಕ ಸಂಪರ್ಕಿಸಿ.

ನಿಮ್ಮ ಪ್ರಸ್ತಾವನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ.

## ಪ್ರಾಜೆಕ್ಟ್ ೫೬೦, ೨೦೧೫

ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್
'ಅಪೂರ್ವ', ನೆಲ ಮಹಡಿ, ನಂಬರ್-೨೫೯
೪ನೇ ಅಡ್ಡರಸ್ತೆ, ರಾಜ್ ಮಹಲ್ ವಿಲಾಸ್
೨ನೇ ಹಂತ, ೨ನೇ ಬ್ಲಾಕ್
ಬೆಂಗಳೂರು - ೫೬೦ ೦೯೪

**ದೂರವಾಣಿ ಸಂಖ್ಯೆ - ೦೮೦-೨೩೪೧೪೬೮೧/೮೨**